144ನೇ ಅಧಿವೇಶನದಲ್ಲಿ

ನಿ-72
ರ-156

# ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀಮತಿ ಎಸ್.ವೀಣಾ ಅಚ್ಚಯ್ಯ ಇವರು ನೀಡಿರುವ ಗಮನ ಸೆಳೆಯು ಸೂಚನೆಗೆ ಸರ್ಕಾರದ ಹೇಳಿಕೆ

***

**ಸೂಚನೆ:-**

**"ಕೊಡಗು ಜಿಲ್ಲೆಯ ಜಮ್ಮಾ ಆಸ್ತಿಯು ಕುಟುಂಬದ ಸರ್ವಸದಸ್ಯರ ಆಸ್ತಿಯಾಗಿದ್ದು, ಸರ್ವ ಸದಸ್ಯರಿಗೂ ಅದರ ಮೇಲೆ ಸಮಾನ ಹಕ್ಕಿದೆ. ಜಮ್ಮಾ ಆಸ್ತಿಗೆ ಪ್ರತಿ ಕುಟುಂಬದ ಪಟ್ಟೇದಾರ ಕಸ್ಟೋಡಿಯನ್ ಆಗಿರುತ್ತಾರೆ. ಈ ಮೊದಲಿನ ಜಮಾಬಂಧಿಯಲ್ಲಿ ಪಟ್ಟೇದಾರರ ಹೆಸರು ಮೂರನೇ ಕಾಲಂ ನಲ್ಲಿ ಇರುತ್ತಿತ್ತು. ಇತರ ಹಕ್ಕುದಾರರ ಹೆಸರು ಆರನೇ ಕಾಲಂನಲ್ಲಿ ಇರುತ್ತಿತ್ತು. ಆದರೆ 2000-01ನೇ ಸಾಲಿನಲ್ಲಿ ಕೊಡಗು ಜಿಲ್ಲಾಧಿಕಾರಿಗಳ ಆದೇಶವನ್ನು ಆಧರಿಸಿ ಪಟೇದಾರರ ಹೆಸರನ್ನು ಆರ್.ಟಿ.ಸಿ. ಯ ಮೂರನೇ ಕಾಲಂ ನಿಂದ ಒಂಭತ್ತನೇ ಕಾಲಂ ಗೆ ವರ್ಗಾಯಿಸಲಾಗಿದೆ. ಇದರಿಂದಾಗಿ ಪಟ್ಟೇದಾರರ ವಂಶಸ್ಥರಿಗೆ ಇಡೀ ಕುಟುಂಬದ ಆಸ್ತಿಯ ಮೇಲೆ ಹಕ್ಕು ಲಭಿಸಿದ್ದು, ಕುಟುಂಬದ ಇತರ ಸದಸ್ಯರು ಅತಂತ್ರವಾಗಿರುವ ಗಂಭೀರ ಸಮಸ್ಯೆ ಕುರಿತು ಸದನದಲ್ಲಿ ಕಂದಾಯ ಸಚಿವರ ಗಮನ ಸೆಳೆಯುವುದು "**

***

**ಸರ್ಕಾರದ ಹೇಳಿಕೆ:**

ಕೊಡಗು ಜಿಲ್ಲೆಯಲ್ಲಿ ಜಮಾಬಂಧಿ ವಹಿಯನ್ನು ನಿರ್ವಹಿಸಲಾಗುತ್ತಿದ್ದು, ಜಮ್ಮಾ ಹಿಡುವಳಿ ಸಂಬಂಧಿಸಿದಂತೆ ಜಮ್ಮಾ ಬಂಧಿ ವಹಿಯ ಕಾಲಂ 3 ರಲ್ಲಿ ಪಟ್ಟೇದಾರರ ಹೆಸರುಗಳನ್ನು ನಮೂದಿಸಲಾಗಿರುತ್ತದೆ. ಹಾಗೂ ಕಾಲಂ 6 ರಲ್ಲಿ ಹಕ್ಕುದಾರರ ಹೆಸರುಗಳನ್ನು ನಮೂದಿಸಲಾಗಿರುತ್ತದೆ.

ಕರ್ನಾಟಕ ಭೂ ಕಂದಾಯ ನಿಯಮಗಳು, 1966ರ ನಿಯಮ 40 ರಡಿಯಲ್ಲಿ ಭೂಮಿಯನ್ನು ಸ್ವಾಧೀನದಲ್ಲಿಟ್ಟುಕೊಂಡಿರುವ ವ್ಯಕ್ತಿಗಳ ಅಥವಾ ಭೂಮಿಯ ಮೇಲೆ ಅಧಿಕಾರ ಹೊಂದಿರುವ ವ್ಯಕ್ತಿಗಳ ಅಥವಾ ಭೂಮಿಯ ಸಂಬಂಧದಲ್ಲಿ ತಾವು ಹೊಂದಿರುವ ಹಿತಾಸಕ್ತಿಯ ಸ್ವರೂಪ ಮತ್ತು ವ್ಯಾಪ್ತಿಯ ಬಗ್ಗೆ ಒದಗಿಸುವ ಮಾಹಿತಿಯನ್ನು ನಿಯಮಗಳಲ್ಲಿ ನಿರ್ದಿಷ್ಟಪಡಿಸಿದಂತೆ ನಮೂನೆ-16 ಅಂದರೆ ಆರ್.ಟಿ.ಸಿ. ಯಲ್ಲಿ ದಾಖಲಿಸಬೇಕಾಗಿರುತ್ತದೆ.

ಆರ್.ಟಿ.ಸಿ. ಅಥವಾ ಪಹಣಿ ಪತ್ರಿಕೆಯು ಜಮೀನಿನ ವಿವರಗಳು, ಹಕ್ಕುದಾರರ ಹಕ್ಕು/ಗೇಣಿ, ಬೆಳೆಗಳ ವಿವರಗಳನ್ನು ಒಳಗೊಂಡಿರುತ್ತದೆ ಈ ಹಿಂದೆ ಆರ್.ಟಿ.ಸಿ. ಯನ್ನು ಕೈಬರಹದಲ್ಲಿ ಬರೆಯುತ್ತಿದ್ದು, 2000-01ನೇ ಸಾಲಿನಿಂದ ಎಲ್ಲಾ ಕೈಬರಹದ ಆರ್.ಟಿ.ಸಿ. ಗಳನ್ನು ಗಣಕೀಕರಣಗೊಳಿಸಲಾಗಿದೆ.

................2

ಜಿಲ್ಲೆಯಲ್ಲಿ ಜಮ್ಮಾ ಹಿಡುವಳಿಗಳನ್ನು ಹೊಂದಿರುವ ಕುಟುಂಬಗಳಲ್ಲಿ ಪಟ್ಟೆದಾರಿಕೆ (ಹಿರಿಯ [illegible] ಹೊಂದಿರುವವರು ಜಮಾಬಂದಿಯ 3ನೇ ಕಾಲಂ ನಲ್ಲಿ ಮತ್ತು ಕುಟುಂಬದ ಉಳಿದ ಹಕ್ಕುದಾರರು 6ನೇ ಕಾಲಂ ನಲ್ಲಿ ದಾಖಲಿಸಿದ್ದು, ಪಹಣಿಗೆ ತರ್ಜುಮೆ ಮಾಡಿದಾಗ ಜಮಾಬಂದಿಯ 3ನೇ ಮತ್ತು 6ನೇ ಕಾಲಂ ನಲ್ಲಿ ದಾಖಲಿಸಿರುವ ಎಲ್ಲರನ್ನೂ ಪಹಣಿಯ 9ನೇ ಕಾಲಂ ನಲ್ಲಿ ಹಕ್ಕುದಾರರಾಗಿ ದಾಖಲು ಮಾಡಬೇಕಾಗಿರುತ್ತದೆ.

ಜಮಾಬಂದಿ ಚಾಲ್ತಿಯಲ್ಲಿದ್ದಾಗ ಭೂಮಿ ಮತ್ತು ಬಾಣೆ ಜಮಾಬಂದಿಗಳಿದ್ದು, ಬಾಣೆ ಜಮಾಬಂದಿಯಲ್ಲಿ ಕಾಲಂ 3 ರಲ್ಲಿ ಮಾತ್ರ ಪಟ್ಟೇದಾರರ ಹೆಸರು ದಾಖಲಿಸಿದ್ದು, ಕಂದಾಯಕ್ಕೆ ಬಾರದ ಕಾರಣ 6ನೇ ಕಾಲಂ ನಲ್ಲಿ ವಿಸ್ತೀರ್ಣ ಮಾತ್ರ ದಾಖಲಿಸಿರುವುದಾಗಿದೆ. ಬಾಣೆ ಜಮಾಬಂದಿಯನ್ನು ಪಹಣಿಗೆ ತರ್ಜುಮೆ ಮಾಡಿದಾಗ ಪಹಣಿಯ ಕಾಲಂ 9 ರಲ್ಲಿ ಜಮಾಬಂದಿಯ 3ನೇ ಕಾಲಂ ನಲ್ಲಿ ದಾಖಲಿಸಿದ ಪಟ್ಟೇದಾರರ ಹೆಸರನ್ನು ಮಾತ್ರ ದಾಖಲಿಸುತ್ತಿದ್ದುದಾಗಿದೆ.

**(ಕಡತ ಸಂಖ್ಯೆ:ಕಂಇ 18 ಎಲ್‌ಜಿಓ 2021)**

**(ಆರ್.ಅಶೋಕ)**
ಕಂದಾಯ ಸಚಿವರು.